ಓ.ಎಸ್. ನಂ. 66/2009
ಡಿ.ಡಬ್ಲ್ಯೂ -3

ಓ.ಎಸ್. ನಂ. 66/2009
ಡಿ.ಡಬ್ಲ್ಯೂ -3

**ಸಾಕ್ಷಿಯನ್ನು ದಿನಾಂಕ: 20.02.2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ ಶ್ರೀ ಪಿ.ಡಿ.ಟಿ. ವಕೀಲರಿಂದ**

**1.** ನಾನು ಅನಕ್ಷರಸ್ಥೆ. ನನ್ನ ಮದುವೆಯಾದಾಗ ನನ್ನ ವಯಸ್ಸು 14 ವರ್ಷವಾಗಿತ್ತು. ನನ್ನ ಗಂಡನ ಊರು ಮಸಣಿಪಾಳ್ಯ, ತುಮಕೂರು ತಾಲ್ಲೂಕು. ನನ್ನ ಗಂಡ 10-15 ವರ್ಷಗಳ ಹಿಂದೆ ಮರಣಹೊಂದಿರುತ್ತಾರೆ. ನನ್ನ ಗಂಡನ ಜೀವಂತ ಕಾಲದಲ್ಲಿ ನಾನು ನನ್ನ ಗಂಡನ ಜೊತೆ ಅವರ ಮನೆಯಲ್ಲಿದ್ದೆ. ಈಗ ನಾನು ತುಮಕೂರಿನ ಯಲ್ಲಾಪುರದಲ್ಲಿ ನನ್ನ ಮಕ್ಕಳ ಜೊತೆ ವಾಸವಾಗಿರುತ್ತೇನೆ ಎಂದರೆ ಸರಿ. ದಾವಾ ಸ್ವತ್ತುಗಳು ನರಸಪ್ಪ ಮತ್ತು ಜೀವಪ್ಪನವರ ಪಿತ್ರಾರ್ಜಿತ

ಸ್ವತ್ತುಗಳು ಎಂದರೆ ಸರಿ. ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ನರಸಪ್ಪ ಮತ್ತು ಜೀವಪ್ಪನವರ ಮಧ್ಯೆ ವಿಭಾಗ ಆಗಿರುತ್ತದೆ. ಎಷ್ಟು ವರ್ಷಗಳ ಹಿಂದೆ ವಿಭಾಗ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ವಿಭಾಗವಾದ ಬಗ್ಗೆ ವಿಭಾಗ ಪತ್ರವನ್ನು ಬರೆದಿರುವುದಿಲ್ಲ. ವಿಭಾಗದಂತೆ ನರಸಪ್ಪನವರಿಗೆ ಯಾವ-ಯಾವ ಆಸ್ತಿಗಳು ಬಂದಿರುತ್ತವೆ ಎಂದು ಹೇಳಲು ಆಗುವುದಿಲ್ಲ, ಸಾಕ್ಷಿಯು ಮುಂದುವರೆದು 2 ಆಸ್ತಿಗಳನ್ನು ನೀಡಿರುತ್ತಾರೆ ಎಂದು ನುಡಿದಿದ್ದಾರೆ. ವಿಭಾಗದ ಪ್ರಕಾರಣ ಮ್ಯುಟೇಷನ್ ಅಂಗೀಕರಣವಾಗಿರುವುದಿಲ್ಲ. ನರಸಪ್ಪ ಮತ್ತು ಜೀವಪ್ಪನವರ ಮಧ್ಯೆ ನೊಂದಣಾಯಿತ ವಿಭಾಗ ಪತ್ರವಾಗಿರುವುದಿಲ್ಲ.

**2.** ನರಸಪ್ಪ ಮತ್ತು ಜೀವಪ್ಪನವರು ಜೀವಂತವಿರುವವರೆಗೂ ಜಂಟಿಯಾಗಿದ್ದರು ಎಂದರೆ ಸರಿಯಲ್ಲ. ನರಸಪ್ಪ ಮತ್ತು ಜೀವಪ್ಪನವರ ಮರಣಾನಂತರವೂ ಅವರ ಮಕ್ಕಳು ಜಂಟಿಯಾಗಿ ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ವಾದಿಯ ತಂದೆ 100 ರೂ. ತೆಗೆದುಕೊಂಡು ದಾವಾ ಸ್ವತ್ತನ್ನು ಬಿಟ್ಟುಕೊಟ್ಟಿರುವ ಬಗ್ಗೆ ನಾನು ಪ್ರಮಾಣ ಪತ್ರದಲ್ಲಿ ಹೇಳಿದ್ದು ಆ ಬಗ್ಗೆ ದಾಖಲೆ ಇದೆಯೇ ಎಂದರೆ ಇದೆ ಎಂದು ನುಡಿದಿದ್ದಾರೆ. ನರಸಪ್ಪನವರ ಸಹಿಯನ್ನು ನೋಡಿದರೆ ಗುರುತಿಸಲು ಸಾಧ್ಯವಿಲ್ಲ.

**3.** ಹನಮಯ್ಯನಿಗೆ ನರಸಪ್ಪ ಎಂಬ ಮಗನಿದ್ದನು ಎಂದರೆ ಸಾಕ್ಷಿಯು ನರಸಯ್ಯ ಎಂಬ ಮಗ ಇದ್ದನು ಎಂದು ನುಡಿದಿದ್ದಾರೆ. ಹನಮಯ್ಯನಿಗೆ ನರಸಯ್ಯ ಎಂಬ ಮಗನಿದ್ದನು ಎಂಬ ಬಗ್ಗೆ ನಾನು 100 ರೂಪಾಯಿಯ ದಾಖಲೆಯನ್ನು ನೋಡಿರುತ್ತೇನೆ. ಸದರಿ ದಾಖಲೆ 60-70 ವರ್ಷಗಳ ಹಿಂದಿನದ್ದು. ಸದರಿ ದಾಖಲೆಗೆ ನಾನು ಹೆಬ್ಬೆಟ್ಟನ್ನು ಹಾಕಿರುವುದಿಲ್ಲ. ಸದರಿ ದಾಖಲೆ ಬರೆಯುವ ಕಾಲಕ್ಕೆ ನನ್ನ ಮದುವೆಯಾಗಿತ್ತು. ನನ್ನ ಮದುವೆಯಾದ 2-3 ವರ್ಷಗಳ ನಂತರ ಸದರಿ 100 ರೂಪಾಯಿಯ ದಾಖಲೆಯನ್ನು ಬರೆದಿರುತ್ತಾರೆ. ಸದರಿ 100 ರೂಪಾಯಿಯ ದಾಖಲೆಯನ್ನು ಎಲ್ಲ ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳನ್ನು ನರಸಪ್ಪನವರು ಒಟ್ಟು ಕುಟುಂಬದಲ್ಲಿ ಅನುಭವಿಸುತ್ತಿದ್ದು ಅವರ ಮರಣಾನಂತರ ವಾದಿಯು ಒಟ್ಟು ಕುಟುಂಬದಲ್ಲಿ ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ 100 ರೂಪಾಯಿಯ ದಾಖಲೆಯು ಇರುವುದಿಲ್ಲ ಎಂದರೆ ಸರಿಯಲ್ಲ. ನನಗೂ ವಾದಿಗೂ ವೈಷಮ್ಯ ಇರುವುದರಿಂದ ಅವರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಓ.ಎಸ್. ನಂ. 66/2009
ಡಿ.ಡಬ್ಲ್ಯೂ -3

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಹಿ/-**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**